ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1492
2	ಸದಸ್ಯರ ಹೆಸರು	ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	17.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸರ್ಕಾರದಿಂದ ಮಂಜೂರು ಮಾಡಿರುವ ಜಮೀನುಗಳ ಪೋಡಿ ದುರಸ್ತಿಗೆ ಎಷ್ಟು ಅರ್ಜಿಗಳನ್ನು ರೈತರಿಂದ ಸ್ವೀಕರಿಸಲಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮಂಜೂರಿ ಜಮೀನುಗಳ ಪೋಡಿ ದುರಸ್ತಿಗಾಗಿ ಒಟ್ಟು 12330 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಅರ್ಜಿಗಳ ಪೈಕಿ ಒಟ್ಟು 6758 ಪ್ರಕರಣಗಳಲ್ಲಿ ಪೋಡಿ ದುರಸ್ತಿ ಕಾರ್ಯ ಪೂರೈಸಲಾಗಿದೆ. (ಜಿಲ್ಲಾವಾರು ವಿವರ **ಅನುಬಂಧ-1** ರಲ್ಲಿ ಲಗತ್ತಿಸಿದೆ)
ಆ)	ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ ಇಲಾಖಾ ವತಿಯಿಂದ ಈವರೆಗೆ ಎಷ್ಟು ಪ್ರಕರಣಗಳ ಪೋಡಿ ದುರಸ್ತಿ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರ ನೀಡು ವುದು)	
ಇ)	ಪೋಡಿ ದುರಸ್ತಿ ಮಾಡಲು ನ್ಯಾಯಾಲಯದ ಮೊರೆ ಹೋದ ಪ್ರಕರಣಗಳೆಷ್ಟು; ನ್ಯಾಯಾಲಯದ ನಿರ್ದೇಶನದ ಮೇರೆಗೆ ಈವರೆವಿಗೆ ಎಷ್ಟು ಪ್ರಕರಣಗಳಲ್ಲಿ ಪೋಡಿ ದುರಸ್ತಿ ಆಗಿದೆ; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಪೋಡಿ ದುರಸ್ತಿ ಕುರಿತು ನ್ಯಾಯಾಲಯದಲ್ಲಿ 61 ಪ್ರಕರಣ ದಾಖಲಾಗಿದ್ದು. ನ್ಯಾಯಾಲಯದ ನಿರ್ದೇಶನದಂತೆ ಪೋಡಿ ದುರಸ್ತು ಕಾರ್ಯ ಪೂರೈಸಲಾಗಿದೆ. (ಜಿಲ್ಲಾವಾರು ವಿವರ **ಅನುಬಂಧ-1** ರಲ್ಲಿ ಲಗತ್ತಿಸಿದೆ)
ಈ)	ನ್ಯಾಯಾಲಯದ ನಿರ್ದೇಶನದ ಮೇರೆಗೆ ಪ್ರತಿ ಪೋಡಿ ಪ್ರಕರಣಗಳು ಬಗೆಹರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	**ಬಂದಿದೆ** ದರಖಾಸ್ತು ಪೋಡಿ ಪ್ರಕರಣಗಳ ದುರಸ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವಾಗಿರುವುದಿಲ್ಲ.
ಉ)	ಹಾಗಿದ್ದಲ್ಲಿ, ಪೋಡಿ ದುರಸ್ತಿಗೆ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವೇ; ಈ ಸಂಬಂಧ ಸರ್ಕಾರದ ನಿಲುವೇನು?	ಸದರಿ ದರಖಾಸ್ತು ಪೋಡಿ ಪ್ರಕರಣಗಳಲ್ಲಿ ತ್ವರಿತವಾಗಿ ದುರಸ್ತಿ ಕಾರ್ಯ ಪೂರ್ಣಗೊಳಿಸಲು ಈಗಾಗಲೆ ಸರ್ಕಾರವು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ. 1) ತುರ್ತು ಸಂಧರ್ಭಗಳಲ್ಲಿ ಜಿಲ್ಲಾಧಿಕಾರಿಗಳು ಭೂ ಮಂಜೂರಿಯು ನೈಜತೆಯಿಂದ ಕೂಡಿರುವ ಬಗ್ಗೆ ಪರಿಶೀಲಿಸಿ, ದೃಡಿಕರಿಸಿದ ನಂತರ ಏಕ ವ್ಯಕ್ತಿ ಪ್ರಕರಣದಡಿ ದುರಸ್ತಿ ಪಡಿಸಲಾಗುತ್ತಿತ್ತು.ಕಾರಣ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದನ್ನು ಗಮನಿಸಿ ಸರ್ಕಾರವು ಸುತ್ತೋಲೆ **ಸಂಖ್ಯೆ ಕಂಇ 8 ಎಲ್‌ಜಿಪಿ 2016 ದಿನಾಂಕ: 20-06-2016 ಹಾಗೂ ತಿದ್ದುಪಡಿ ಕಂಇ 8 ಎಲ್‌ಜಿಪಿ 2016 (ಭಾಗ-1)ದಿನಾಂಕ: 18-07-2016** ರನ್ವಯ

		ತಹಶಿಲ್ದಾರರು ಅರ್ಜಿದಾರರಿಗೆ ಆಗಿರುವ ಭೂಮಂಜೂರಿಯು ನೈಜತೆಯಿಂದ ಕೂಡಿರುವ ಬಗ್ಗೆ ಪರಿಶೀಲಿಸಿ, ದೃಢೀಕರಿಸಿ ಏಕವ್ಯಕ್ತಿಗೆ ಪ್ರಕರಣದಡಿ ಪೋಡಿ ಮಾಡಲು ಅವಕಾಶ ನೀಡಲಾಗಿದೆ. 2) ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ 3) ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಕಡತ ಗಳನ್ನು ಕ್ಯಾಟ್-ಲಾಗ್ ಮತ್ತು ಇಂಡೆಕ್ಸಿಂಗ್ ಮಾಡಲು ಸರ್ಕಾರದಿಂದ ಸೂಚಿಸಲಾಗಿದೆ. 4) ಸರ್ಕಾರದ ಸೂಚನೆಯನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿ ಗಳನ್ನು ನೀಡಲಾಗಿದೆ. 5) ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿ ಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಸೂಚನೆ ನೀಡಲಾಗುತ್ತಿದೆ. 6) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣ ಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಇದರಿಂದ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ

<u>**ಸಂಖ್ಯೆ: ಕಂಇ 47 ಎಸ್‌ಎಸ್‌ಸಿ 2021**</u>

(ಆರ್.ಅಶೋಕ)

ಕಂದಾಯ ಸಚಿವರು

ಅನುಬಂಧ-1

	ರಾಜ್ಯದಲ್ಲಿ ಪೋಡಿ ದುರಸ್ತಿಗೆ ಸ್ವೀಕರಿಸಿದ ಮತ್ತು ದುರಸ್ತಿ ಪಡೆಸಿರುವ ಪ್ರಕರಣಗಳ ವಿವರ			
[illegible]	ಜಿಲ್ಲೆ	ಪೋಡಿ ದುರಸ್ತಿ ಕೋರಿ ಸ್ವೀಕೃತವಾಗಿರುವ ಪ್ರಕರಣಗಳ ಸಂಖ್ಯೆ	ಈವರೆಗೆ ಪೋಡಿ ದುರಸ್ತಿ ಪಡಿಸಿರುವ ಪ್ರಕರಣಗಳ ಸಂಖ್ಯೆ	ಪೋಡಿ ದುರಸ್ತಿ ನ್ಯಾಯಾಲಯದ ಮೊರೆ ಹೋದ ಮತ್ತು ನ್ಯಾಯಾಲಯದ ನಿರ್ದೇಶನದ ಮೇರೆಗೆ ಪೋಡಿ ದುರಸ್ತಿಯಾದ ಪ್ರಕರಣಗಳ ಸಂಖ್ಯೆ
1	ಬೆ.ನಗರ	208	153	40
2	ಬೆ.ಗ್ರಾಮಾಂತರ	242	78	6
3	ರಾಮನಗರ	328	3	2
4	ಕೋಲಾರ	1170	111	3
5	ಚಿತ್ರದುರ್ಗ	8	3	1
6	ತುಮಕೂರು	2	0	1
7	ಶಿವಮೊಗ್ಗ	87	51	0
8	ದಾವಣಗೆರೆ	65	4	0
9	ಚಿಕ್ಕಬಳ್ಳಾಪುರ	19	7	0
10	ಮೈಸೂರು	63	135	0
11	ಮಂಡ್ಯ	116	24	7
12	ಚಾಮರಾಜನಗರ	112	58	0
13	ಹಾಸನ	235	159	0
14	ಕೊಡಗು	71	49	0
15	ಚಿಕ್ಕಮಗಳೂರು	324	175	0
16	ದ.ಕನ್ನಡ	253	28	0
17	ಉಡುಪಿ	8198	5599	0
18	ಬೆಳಗಾವಿ	21	0	0
19	ಧಾರವಾಡ	0	0	0
20	ಹಾವೇರಿ	56	52	1
21	ಬಾಗಲಕೋಟೆ	9	9	0
22	ವಿಜಯಪುರ	0	0	0
23	ಉತ್ತರಕನ್ನಡ	30	8	0
24	ಗದಗ	2	2	0
25	ಕಲಬುರಗಿ	0	0	0
26	ಬಳ್ಳಾರಿ	685	1	0
27	ಕೊಪ್ಪಳ	0	24	0
28	ಬೀದರ	1	0	0
29	ರಾಯಚೂರು	25	25	0
30	ಯಾದಗಿರಿ	0	0	0
	ಒಟ್ಟು	**12330**	**6758**	**61**